**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 100/2018.**

**ಸಿ.ಡಬ್ಲ್ಯೂಃ-8 ಪಿ.ಡಬ್ಲ್ಯೂಃ-5**

**ದಿಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಮಹಾದೇವಿ ಕೋಂ ಸಿದ್ದಪ್ಪಾ ಹರಕೆ |
| ವಯಸ್ಸು | : | 34 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಜೋಡಕುರಳಿ. |

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ಚಾ.ಸಾ.1 ನನ್ನ ಗಂಡ.

2) ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು.

3) ಈಗ್ಗೆ 11 ವರ್ಷಗಳ ಹಿಂದೆ ನಾವು ನಮ್ಮ ತೋಟದ ಮನೆಯಲ್ಲಿದ್ದಾಗ ಸಂಜೆ 05.00 ರಿಂದ 05.30 ಗಂಟೆ ಸುಮಾರಿಗೆ ಜೋಡಕುರಳಿ ಗ್ರಾಮದ ನಮ್ಮ ಹೊಲದಲ್ಲಿ ಟ್ರ್ಯಾಕ್ಟರನಿಂದ ಗಳೆ ಹೊಡೆಯುತ್ತಿದ್ದಾಗ ಆರೋಪಿತರೆಲ್ಲರೂ ಬಂದು ಏಕಾಏಕಿ ಕಟ್ಟಿಗೆ ಮತ್ತು ಕಲ್ಲು ತೆಗೆದುಕೊಂಡು ಬಂದು ಹೊಡೆಯಲು ಆರಂಭಿಸಿದರು. ನಾವು ಗಂಡು ಮಕ್ಕಳಿಗೆ ಹೊಡೆಯುತ್ತಿದ್ದಾಗ ಓಡಿ ಬಂದೇವು. ಆರೋಪಿತರ ಪೈಕಿ ಗಂಗವ್ವಾ , ಲಕ್ಷ್ಮಣ, ಹಾಲಪ್ಪಾ , ಸುರೇಶ,

ನಿಂಗಪ್ಪಾ ನನಗೆ ಬಡಿಗೆಯಿಂದ ಬಡಿದರು. ಅದರಿಂದ ನನ್ನ ಎಡಗಾಲು ಮೊಣಕಾಲು ಮುರಿಯಿತು. ನನ್ನ ಎಡಗೈ ಮುರಿಯಿತು ಹಾಗೂ ಬೆನ್ನಿಗೆ ಗಾಯಗಳಾದವು. ನಮ್ಮ ಮನೆ ಮಂದಿಗೆಲ್ಲಾ ಬಡಿಗೆ ಮತ್ತು ಕಲ್ಲುಗಳಿಂದ ಬಡಿದರು. ನಂತರ ದವಾಖಾನೆಗೆ ಬಂದೇವು. ನನ್ನ ಗಂಡ ಕಂಪ್ಲೆಂಟ್ ಕೊಟ್ಟ.

4) ಆರೋಪಿತರು ಬಡಿದ ಬಡಿಗೆಗಳನ್ನು ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಮು.ಮಾ.1 ರಿಂದ 19 ತೋರಿಸಲಾಗಿ ಅವುಗಳಿಂದಲೇ ಆರೋಪಿತರು ಬಡಿದಿದ್ದಾಗಿ ಗುರುತಿಸುತ್ತಾರೆ.

5) ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಮ್ಮ ಮನೆಯ ಮುಂದಿರುವ 10 ಎಕರೆ ಜಮೀನು ವಿಚಾರವಾಗಿ ನಮಗೆ ಹಾಗೂ ಆರೋಪಿತರಿಗೆ ಬಹಳ ವರ್ಷಗಳಿಂದ ಜಗಳ ಇತ್ತು ಎಂದರೆ ಸರಿ.

2) ದಿನಾಂಕಃ 20.04.2014 ರಂದು ಸಂಜೆ 05.00 ಗಂಟೆ ಸುಮಾರಿಗೆ

ನಮ್ಮ ಪಾಲಿಗೆ ಬಂದ ಜಮೀನದಲ್ಲಿ ನಾವು ಗಳೆ ಹೊಡೆಯುತ್ತಿದ್ದಾಗ 3ನೇ ಆರೋಪಿ ಬಂದು ಗಳೆ ಹೊಡೆಯಬೇಡಿರಿ ಅಂತಾ ತಕರಾರು ಮಾಡಿದ ಎಂದರೆ ಸರಿ. ಆ ಕಾಲಕ್ಕೆ ಚಾ.ಸಾ.12 ಮತ್ತು 13 ರವರನ್ನು ಕರೆಸಿ ಬುದ್ದಿವಾದ ಹೇಳಿಸಿದೇವು ಎಂದರೆ ಸರಿ. ಆ ಹಿರಿಯರ ಮಾತು ಕೇಳದೇ ಆರೋಪಿತರು ಕೈಯಲ್ಲಿ ಬಡಿಗೆಗಳನ್ನು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ನಮಗೆ ಹೇಳದೇ ಕೆಳದೇ ಗಳೆ ಹೊಡೆಯುತ್ತಿದ್ದೀರಿ ಸೂಳೆಮಕ್ಕಳಾ , ಬೋಸಡಿಮಕ್ಕಳಾ ಅಂತಾ ಅವಾಚ್ಯವಾಗಿ ನಮಗೆ ಬೈದರು ಎಂದರೆ ಸರಿ. ನಮ್ಮನ್ನು ಕೊಲ್ಲುವ ಸಲುವಾಗಿ ನನಗೀಗ ತೋರಿಸಿದ ಮು.ಮಾ.1 ರಿಂದ 15 ಬಡಿಗೆಗಳಿಂದ ನಮಗೆಲ್ಲಾ ಹೊಡೆದರು ಹಾಗೂ ನನಗೀಗ ತೋರಿಸಿದ ಮು.ಮಾ.16 ರಿಂದ 19 ಕಲ್ಲುಗಳಿಂದ ನಾವು ಕೆಳಗೆ ಬಿದ್ದ ಮೇಲೆ ನಮ್ಮ ಮೇಲೆ ಎಸೆದರು ಎಂದರೆ ಸರಿ. ಆಗ ನಮಗಾದ ಗಾಯಗಳಿಗೆ ನಾವು ಚಿಕ್ಕೋಡಿ ಆಸ್ಪತ್ರೆಗೆ ಬಂದು ತೋರಿಸಿಕೊಂಡು ನಂತರ ಚರಾಟೆ ಆಸ್ಪತ್ರೆಯಲ್ಲಿ ಉಪಚಾರಗೊಂಡೇವು ಎಂದರೆ ಸರಿ. ಸದರಿ ವಿಚಾರವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ-</u>** 2, 4, 7, 9, 11 **ರಿಂದ** 14 **ಮತ್ತು** 16 **ನೇ ಆರೋಪಿತರ ಪರಃ ಶ್ರೀ ಎಸ.ಎಸ.ಡಿ.ವಕೀಲರಿಂದ** :

1) ನಮ್ಮ ಮತ್ತು ಆರೋಪಿತರ ಮದ್ಯೆ ಇದ್ದ ಜಮೀನಿನ ವಿಚಾರವಾಗಿ ಅಪಸಾತಿಯಾಗಿ ಲೋಕ ಅದಾಲತನಲ್ಲಿ ಪ್ರಕರಣ ಮುಗಿದಿದೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು 5 ಎಕರೆ 2 ಗುಂಟೆ ಹಾಗೂ ಆರೋಪಿತರು 5

ಎಕರೆ 2 ಗುಂಟೆ ಜಮೀನದಲ್ಲಿ ಪ್ರತ್ಯೇಕ ವಹಿವಾಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2) ನನ್ನ ಗಂಡ ಹಾಗೂ ಮೈದುನ ಆರೋಪಿತರ ಖೊಟ್ಟಿ ಸಹಿ ಮಾಡಿ ಬ್ಯಾಂಕಿನಿಂದ ಸಾಲ ಪಡೆದಿದ್ದರು ಹಾಗೂ ಜೈಲಗೆ ಹೋಗಿದ್ದರು ಎಂದರೆ ಸರಿ. ಅದರಲ್ಲಿ ನಾನು 9ನೇ ಆರೋಪಿ ಇದ್ದೇನೆ ಎಂದರೆ ಸರಿ. ಆ ರೀತಿ ಜೈಲಿನಲ್ಲಿ ಬಂದು ಬಿದ್ದ ಮೇಲೆ ನನ್ನ ಕಡೆಯಿಂದ ಜಾತಿನಿಂದನೆ ಪ್ರಕರಣ ಕೊಟ್ಟಿದ್ದೆ ಎಂದರೆ ಸರಿ. ಆ ಪ್ರಕರಣದಲ್ಲಿ ಆರೋಪಿತರನ್ನು ಖುಲಾಸೆ ಮಾಡಲಾಗಿದೆ ಎಂದರೆ ಸರಿ.

3) ಗಲಾಟೆಯಾದಾಗ ನಾನು ಮನೆಯಲ್ಲಿದ್ದೆ. ನನ್ನನ್ನು ಬಾಗಿಲದ ಬಳಿ ಮನೆಯ ಮುಂದೆ ಬಡಿದರು.

4) ಲಕ್ಷ್ಮಣ , ಗಂಗವ್ವಾ ಹಾಲಪ್ಪಾ ಸುರೇಶ , ನಿಂಗಪ್ಪಾ ಕೂಡಿ ನನಗೆ ಬಡಿದರು ಅಂತಾ ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ.

5) ಪೋಲಿಸರು ನನಗೆ ಹೇಳಿಕೆ ಕೇಳಿ ಜವಾಬು ಮಾಡಿಕೊಂಡಿಲ್ಲ ಎಂದರೆ ಸರಿ.

6) ಸುರೇಶ ಒಬ್ಬನೇ ನನ್ನನ್ನು ಬಡಿದಿದ್ದಾನೆ ಅಂತಾ ನಾನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿ.

7) ನಾವು ಎಲ್ಲರೂ ಟ್ರ್ಯಾಕ್ಟರ ಮೇಲೆ ಹೋಗುವಾಗ ಬಿದ್ದು ಗಾಯ ಮಾಡಿಕೊಂಡಿದ್ದೇವೆ , ಆರೋಪಿತರು ನಮಗೆ ಹೊಡೆಬಡೆ ಮಾಡಿಲ್ಲ ಎಂದರೆ ಸರಿಯಲ್ಲ.

8) ಆರೋಪಿತರು ಯಾವ ತರಹದ ಬಡಿಗೆಗಳಿಂದ ಬಡಿದಿದ್ದಾರೆ ಅಂತಾ ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಬೇಸುದ್ದಿಯಾಗಿರಲಿಲ್ಲ. ಇವೇ ಬಡಿಗೆಗಳು ಅಂತಾ ಗುರುತಿಸಲು ಪೋಲಿಸರು ನನ್ನ ಸಮಕ್ಷಮ ಅವುಗಳ ಮೇಲೆ ವಿಶೇಷ ಗುರುತು ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ರಕ್ತಗಾಯಗಳಾಗಿದ್ದವು. ನನ್ನ ಬಟ್ಟೆಗಳಿಗೆ ರಕ್ತ ಹತ್ತಿತ್ತು. ಅವುಗಳನ್ನು ಪೋಲಿಸರಿಗೆ ಕೊಟ್ಟಿದ್ದೇನೆ. ಜಾಗಾದಲ್ಲಿ ರಕ್ತ ಬಿದ್ದಿತ್ತು. ಅದನ್ನು ಪೋಲಿಸರು ನೋಡಿದ್ದಾರೆ.

9) ಜಗಳ ಮನೆಯಿಂದ ಸುಮಾರು 20 ಅಡಿ ಅಂತರದಲ್ಲಿ ಆಯಿತು. ಜಗಳ ಅರ್ಧ ಗಂಟೆಯಾಯಿತು. ಬಾಯಿ ಸಪ್ಪಳ ಕೇಳಿ ಬೇರೆ ಜನ ಬಂದು ನೋಡುತ್ತಿದ್ದರು, ಆದರೆ ನಮ್ಮನ್ನು ಬಿಡಿಸಿಕೊಳ್ಳಲಿಲ್ಲ.

10) ನಾನು ಪಂಚಾಯತಿ ಸದಸ್ಯೆ ಇದ್ದೆ ಎಂದರೆ ಸರಿ. ಆ ವೇಳೆಯಲ್ಲಿ ಬಾವಿ ಮಂಜೂರು ಮಾಡಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ದಾನದುಟಗಿ ಮಾಡಿ ಆರೋಪಿತರ ಜಮೀನದಲ್ಲಿ ಬಾವಿ ಕೊರೆಸಿದ್ದೆ ಎಂದರೆ ಸರಿಯಲ್ಲ. ಆರೋಪಿತರು ಹರಕತ್ತು ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಎಲ್ಲಾ

ಹೊಲ ಮಾರಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೆ ಹಣ ಬೇಕಾಗಿದ್ದರಿಂದ ಅಡ ಇಟ್ಟಿದ್ದೇವು ಎಂದು ನುಡಿಯುತ್ತಾರೆ.

11) ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ಹೊಲಕ್ಕೆ ಬಂದಿಲ್ಲ, ನಮ್ಮೊಂದಿಗೆ ಯಾವುದೇ ಜಗಳ ತೆಗೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಮಾಡುವ ಉದ್ದೇಶದಿಂದ ಮು.ಮಾ.1 ರಿಂದ 19 ನೇದ್ದವುಗಳನ್ನು ಬಳಸಿ ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಹಾಗೂ ಕೊಲೆ ಮಾಡುವ ಪ್ರಯತ್ನ ಮಾಡಿಲ್ಲ, ನಮಗೆ ಹೊಡೆಬಡೆ ಮಾಡಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಹೊಲ ಇಲ್ಲದೇ ಇದ್ದ ಕಾರಣ ಹೇಗಾದರೂ ಮಾಡಿ ಹೊಸದಾಗಿ ಹೊಲ ಕಿತ್ತುಕೊಳ್ಳಲು ಸುಳ್ಳು ಕೇಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

8ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.